ಓ.ಎಸ್.ನಂ.14-2011

ಡಿ.ಡಬ್ಲ್ಯೂ -04

**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿಃ 13.01.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. K.N.R.ವಕೀಲರಿಂದ.**

ಪ್ರಮಾಣ ಪತ್ರ ತಯಾರು ಮಾಡಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ನ್ಯಾಯಾಲಯಕ್ಕೆ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ. ನ್ಯಾಯಾಲಯಕ್ಕೆ ಶಿವಮ್ಮಾ ಅವರ ಪರವಾನಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ದಾವೆಯನ್ನು ದಾವಾ ಸ್ವತ್ತು ಬೆಟ್ಟಪ್ಪ ಅವರಿಗೆ ಸೇರಿರುತ್ತದೆಂದು ದಾಖಲೆ ಮಾಡಿರುತ್ತಾರೆಂದು ಹೇಳುತ್ತಾರೆ. ನಾವು ಸಣ್ಣವರು ಇದ್ದಾಗಿನಿಂದ ನಂಜಪ್ಪ ನಂಜಯ್ಯ ಅವರು ಸ್ವಾಧೀನದಲ್ಲಿರುತ್ತಾರೆಂದು ಹೇಳುತ್ತಾರೆ. ಅವರಿಗೆ ಆಸ್ತಿ ಹೇಗೆ ಬಂದಿರುತ್ತದೆಂದು ನನಗೆ ಗೊತ್ತಿಲ್ಲ.

ಪ್ರತಿವಾದಿ 4 ಭೋಗ್ಯದ ಆಧಾರದ ಮೇರೆಗೆ ಖಾತೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಭೋಗ್ಯ ಆಗಿದೆಯೂ ಇಲ್ಲವೂ ಗೊತ್ತಿಲ್ಲವೆಂದು ಹೇಳುತ್ತಾರೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಭೋಗ್ಯದ ಬಗ್ಗೆ ಬರೆಸಿರುತ್ತೀರಿ ಎಂದರೆ ಸಾಕ್ಷಿ ಭೋಗ್ಯ ಆಗಿರುತ್ತದೆಂದು ಹೇಳುತ್ತಾರೆ. ಭೋಗ್ಯ ಪತ್ರದಲ್ಲಿ 5 ವರ್ಷಗಳ ನಂತರ ತಿರುವಳಿ ಮಾಡಿಕೊಳ್ಳಬೇಕೆಂದು ನಮೂದು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗಂಗಯ್ಯ ಅವರು ಭೋಗ್ಯ ಹಾಕಿರುವ ಬಗ್ಗೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಭೋಗ್ಯ ಪತ್ರದ ಆಧಾರದ ಮೇರೆಗೆ ಪ್ರತಿವಾದಿ 4 ಅವರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ.

ಈ ಜಮೀನಿಗೆ ಸಂಬಂಧ ಪಟ್ಟಂತೆ ಭೋಗ್ಯ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಮಾಡಿಲ್ಲವೆಂದರೆ ಸಾಕ್ಷಿ ಭೋಗ್ಯ ಮಾಡಿರುವುದಾಗಿ ಮಾತ್ರ ಹೇಳುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಸ್ವತ್ತು ಬೆಟ್ಟಪ್ಪ ಅವರ ಪಿತ್ರಾರ್ಜಿತ ಸ್ವತ್ತು ಗೌಡಪ್ಪ ಅವರ ಹೆಸರಿಗೆ ಖಾತೆ ಇತ್ತು ಎಂದರೆ ಸಾಕ್ಷಿ ಏನೋ ಗೊತ್ತಿಲ್ಲವೆಂದು ಹೇಳುತ್ತಾರೆ. ದಾವಾ ಸ್ವತ್ತು ಗೌಡಯ್ಯ ಅವರುಪಿತ್ರಾರ್ಜಿತ ಸ್ವತ್ತಾಗಿದ್ದು ಬ್ಯಾಟಪ್ಪ ಅವರು ಭೋಗ್ಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಅವರ ಹೆಸರಿಗೆ ದಾಖಲೆ ಇರಲಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ 4 ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೋಗ್ಯ ಪತ್ರವನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ 147/2 ಕ್ಕೆ ಸಂಬಂಧಿಸಿದಂತೆ ಬೇರೆ ಪ್ರಕರಣಗಳು

ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಬೆಟ್ಟಪ್ಪ ಅವರು 2 ಸಾವಿರ ರೂ. ಗಳಿಗೆ ಭೋಗ್ಯ ಮಾಡಿದ್ದು ಆ ಸಮಯದಲ್ಲಿ ಇದ್ದೀರಾ ಎಂದರೆ ಸಾಕ್ಷಿ ನಾವು ಅಕ್ಕಪಕ್ಕದಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಗಂಗಯ್ಯ ಅವರು 100 ತೆಂಗಿನ ಮರಗಳನ್ನು ನೆಂಟ್ಟಿರುವುದಿಲ್ಲ. ಬ್ಯಾಟಪ್ಪ ಅವರು ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.